The Resource Centre

# Press Clipping

**Publication** : Sanjevani
**Date** : April 20, 2017
**Edition** : Bengaluru
**Page** : 7
**Headlines** : Best employer honour to Home Credit

---

## ಹೋಮ್‌ಕ್ರೆಡಿಟ್‌ಗೆ ಬೆಸ್ಟ್ ಎಂಪ್ಲಾಯರ್ ಮನ್ನಣೆ

ಬೆಂಗಳೂರು: ಮುಂಚೂಣಿಯ ಬ್ಯಾಂಕಿಂಗ್‌ಯೇತರ ಸಣ್ಣ ಹಣಕಾಸು ಸಂಸ್ಥೆಯಾಗಿರುವ ಹೋಮ್‌ಕ್ರೆಡಿಟ್ ಅತ್ಯುತ್ತಮ ಉದ್ಯೋಗದಾತ ಕಂಪೆನಿ ಎಂಬ ಮನ್ನಣೆಗೆ ಪಾತ್ರವಾಗಿದೆ.

ಜಾಗತಿಕ ಪ್ರತಿಭಾನ್ವೇಷಣೆ ಸಂಸ್ಥೆ ಏವನ್ ಹೆವಿಟ್, ಏಷ್ಯಾ ಪೆಸಿಫಿಕ್ ಪ್ರಾಂತ್ಯದಲ್ಲಿ ಹೋಮ್‌ಕ್ರೆಡಿಟ್ ಸಣ್ಣ ಸಾಲ ವಿಭಾಗದಲ್ಲಿ 2017ರ ಏವನ್ ಬೆಸ್ಟ್ಎಂಪ್ಲಾಯರ್ ಎಂದು ಗುರುತಿಸಿದೆ.

ಪ್ರಶಸ್ತಿಯ ಕುರಿತು ಸಂತಸ ವ್ಯಕ್ತಪಡಿಸಿದ ಹೋಮ್‌ಕ್ರೆಡಿಟ್ ಇಂಡಿಯಾದ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಜಿಂಡ್ರಾ ಹಷೊವಾ ಅವರು "ಉದ್ಯೋಗಿಗಳಿಗೆ ಫಲಿತಾಂಶಆಧಾರಿತ ವಾತಾವರಣವನ್ನು ಕಲ್ಪಿಸಿ ಅವರ ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸುವ ಹೋಮ್ ಕ್ರೆಡಿಟ್‌ನ ಚಟುವಟಿಕೆಗಳಿಗೆ ಸಿಕ್ಕ ಮನ್ನಣೆಇದು" ಎಂದಿದ್ದಾರೆ.

ಏವನ್ ಹೆವಿಟ್ 15ಕ್ಕೂ ಹೆಚ್ಚು ವರ್ಷಗಳಿಂದ ವಿಶ್ವಾದ್ಯಂತ ಅತ್ಯುತ್ತಮ ಉದ್ಯೋಗಿಸ್ನೇಹಿ ಚಟುವಟಿಕೆಗಳ ಅಧ್ಯಯನ ನಡೆಸುತ್ತಿದೆ. ಏವನ್ ಬೆಸ್ಟ್ಎಂಪ್ಲಾಯರ್‌ಕಾರ್ಯಕ್ರಮದಡಿ ವಿವಿಧ ಕಂಪೆನಿಗಳ ಸ್ಪರ್ಧಾತ್ಮಕ ಅಂಶಗಳನ್ನು ಗಣನೆಗೆತೆಗೆದುಕೊಂಡು ಪ್ರಶಸ್ತಿಯನ್ನು ನಿರ್ಧರಿಸಲಾಗುತ್ತದೆ.

"ಕೆಲಸದ ಸ್ಥಳದ ವಾತಾವರಣ ಮತ್ತುಔದ್ಯೋಗಿಕ ಗುರಿಗಳ ಸಾಧನೆಗೆ ಅವು ಎಷ್ಟು ಪೂರಕವಾಗಿರುತ್ತವೆ ಎಂಬುದನ್ನು ಏವನ್ ಹೆವಿಟ್ ಗಮನಿಸುತ್ತದೆ" ಎಂದುಏವನ್ ಹೆವಿಟ್‌ನ ಹಿರಿಯಅಧಿಕಾರಿ ನೀಲ್ ಕ್ರಾಫರ್ಡ್ ಹೇಳಿದರು.

ಹೋಮ್‌ಕ್ರೆಡಿಟ್‌ನ ಉದ್ಯೋಗಿಗಳ ಸಕಾರಾತ್ಮಕಅಭಿಪ್ರಾಯ, ನಾಯಕತ್ವ ಅವಕಾಶ, ಸಾಧನೆ ಮತ್ತುಉದ್ಯೋಗದಾತ ಬ್ರಾಂಡ್ ಸೂಚ್ಯಂಕಗಳನ್ನು ಏವನ್ ಹೆವಿಟ್ ಪರಿಶೀಲನೆ ನಡೆಸಿ ಈ ಗೌರವವನ್ನು ನಿರ್ಧರಿಸಿದೆ.